ವಿಜಯವಾಣಿ
ಕನ್ನಡಿಗರ ಧ್ವನಿ

# ರಾಜ್ಯದ ಭರವಸೆಯ ಆಲ್ರೌಂಡರ್ ಪ್ರತ್ಯೂಷಾ






» **ಕ್ರಿಕೆಟ್‌ನಲ್ಲಿ ಮಿಂಚುತ್ತಿದ್ದಾರೆ ಬೆಂಗಳೂರು ಹುಡುಗಿ**

» **5ನೇ ವಯಸ್ಸಿನಲ್ಲೇ ಕೊನರಿತು ಆಟದ ಮೇಲಿನ ಪ್ರೀತಿ**

■ **ಗಣೇಶ್ ಉಕ್ಕಿನಡ್ಕ ಬೆಂಗಳೂರು**

ಟೀಮ್ ಇಂಡಿಯಾದಲ್ಲಿ ಲೆಗ್ ಸ್ಪಿನ್ನರ್ ಆಗಿ ಯಜುವೇಂದ್ರ ಚಾಹಲ್ ಇರುವಂತೆ, ಅವರದ್ದೇ ಶೈಲಿಯಲ್ಲಿ ಬೌಲಿಂಗ್ ಮಾಡಬಲ್ಲ ಆಟಗಾರ್ತಿಯೊಬ್ಬಳು ಕರ್ನಾಟಕ ಮಹಿಳಾ ತಂಡದಲ್ಲೂ ಇದ್ದಾರೆ.

ಕೇವಲ ಬೌಲರ್ ಮಾತ್ರವಲ್ಲದೆ ಸ್ಲಾಗ್ ಓವರ್‌ಗಳಲ್ಲಿ ಬಿರುಸಿನ ಬ್ಯಾಟಿಂಗ್ ಮಾಡಬಲ್ಲ ಇವರು ಬೆಂಗಳೂರಿನ ಆಲ್ರೌಂಡ್ ಕ್ರಿಕೆಟ್ ಆಟಗಾರ್ತಿ ಸಿ. ಪ್ರತ್ಯೂಷಾ.

ಮಹಿಳೆಯರ ಚಾಲೆಂಜರ್ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಇಂಡಿಯಾ ಬ್ಲೂ ತಂಡದ ಪರ ಆಡಿದ್ದ ಪ್ರತ್ಯೂಷಾ, ಫೈನಲ್‌ನಲ್ಲಿ ಇಂಡಿಯಾ ಗ್ರೀನ್ ವಿರುದ್ಧ 4 ವಿಕೆಟ್ ಕಬಳಿಸಿ ಗೆಲುವಿನ ರೂವಾರಿಯಾಗಿದ್ದರು. ಹಾಲಿ ಮಹಿಳಾ ರಾಷ್ಟ್ರೀಯ ಟಿ20 ಲೀಗ್‌ನಲ್ಲಿ ಆಡಿರುವ 5 ಪಂದ್ಯಗಳಲ್ಲಿ 8 ವಿಕೆಟ್ ಕಬಳಿಸಿರುವ 20 ವರ್ಷದ ಪ್ರತ್ಯೂಷಾ, ಭಾರತ ತಂಡದ ಪರ ಆಡುವ ದಿನ ದೂರವಿಲ್ಲ. ಮೂಲತಃ ಆಂಧ್ರದವರಾದರೂ ಹುಟ್ಟಿನಿಂದ ಕುಟುಂಬದೊಂದಿಗೆ ಬೆಂಗಳೂರಿನಲ್ಲೇ ವಾಸವಾಗಿರುವ ಪ್ರತ್ಯೂಷಾ ತಮ್ಮ ಕ್ರಿಕೆಟ್ ಭವಿಷ್ಯದ ಕನಸುಗಳನ್ನು '**ವಿಜಯವಾಣಿ**'ಯೊಂದಿಗೆ ಹೀಗೆ ಹಂಚಿಕೊಂಡರು...

**7ನೇ ವಯಸ್ಸಿನಲ್ಲೇ ಕ್ರಿಕೆಟ್ ಬದುಕು ಆರಂಭ:** ಅಪ್ಪನಿಗೆ ಕ್ರಿಕೆಟ್ ಅಂದರೆ ಇಷ್ಟ. ಇದರಿಂದ ನನ್ನ ಕನಸಿಗೂ ಅವರು ಬೆಂಬಲಿಸಲು ಹಿಂದೆ ಮುಂದೆ ನೋಡಲಿಲ್ಲ. 7ನೇ ವಯಸ್ಸಿನಲ್ಲಿ ಕ್ರಿಕೆಟ್ ಆರಂಭಿಸಿದೆ. ಹೆರಾನ್ಸ್ ಕ್ಲಬ್‌ನಲ್ಲಿ ನಡೆದ ಸಮ್ಮರ್ ಕ್ಯಾಂಪ್ ಮೂಲಕ ಆಯ್ಕೆಯಾದೆ. 12ನೇ ವಯಸ್ಸಿಗೆ 16 ವಯೋಮಿತಿಯ ರಾಜ್ಯ ತಂಡದ ಪರ ಕ್ರಿಕೆಟ್ ಪದಾರ್ಪಣೆ ಮಾಡಿದೆ. 14ನೇ ವಯಸ್ಸಿನಲ್ಲಿ 19 ವಯೋಮಿತಿಯ ಕರ್ನಾಟಕ ತಂಡದಲ್ಲಿ ಆಡುವ ಅವಕಾಶ ಸಿಕ್ಕಿತು. ಈಗ ಸೀನಿಯರ್ ಟೀಮ್‌ನಲ್ಲಿ ಆಡುತ್ತಿದ್ದೇನೆ ಎಂದು ಪ್ರತ್ಯೂಷಾ ತಿಳಿಸಿದರು. ಪ್ರತ್ಯೂಷಾ ಕರ್ನಾಟಕದ ಪರ ಟಿ20 ಮತ್ತು ಏಕದಿನ ಸೇರಿ ಇದುವರೆಗೆ 40ಕ್ಕೂ ಅಧಿಕ ಪಂದ್ಯಗಳನ್ನಾಡಿದ್ದು, 45 ವಿಕೆಟ್ ಮತ್ತು 600ಕ್ಕೂ ಅಧಿಕ ರನ್ ಬಾರಿಸಿದ್ದಾರೆ. ಸಾಫ್ಟ್‌ವೇರ್ ಇಂಜಿನಿಯರ್ ಕೃಷ್ಣ ಪ್ರಸಾದ್ ಮತ್ತು ಸುನೀತಾ ಪ್ರಸಾದ್ ಪುತ್ರಿ.

**ಕೊಹ್ಲಿ, ಚಾಹಲ್ ರೋಲ್ ಮಾಡೆಲ್:** ಜೈನ್ ವಿವಿ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದಲ್ಲಿ ಪದವಿ ಅಭ್ಯಸಿಸುತ್ತಿರುವ ಪ್ರತ್ಯೂಷಾಗೆ ಟೀಮ್ ಇಂಡಿಯಾ ನಾಯಕ ವಿರಾಟ್ ಕೊಹ್ಲಿ ಬ್ಯಾಟಿಂಗ್ ಮತ್ತು ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಬೌಲಿಂಗ್‌ನಲ್ಲಿ ರೋಲ್ ಮಾಡೆಲ್. 'ಖಂಡಿತಾ ನಾನು ಬ್ಯಾಟಿಂಗ್‌ಗೆ ಕೊಹ್ಲಿ ಅವರನ್ನೇ ಮಾದರಿಯನ್ನಾಗಿ ಅನುಸರಿಸುತ್ತೇನೆ. ಚೇಸಿಂಗ್‌ನಲ್ಲಿ ಅವರ ಬ್ಯಾಟಿಂಗ್ ದಾಖಲೆ ಅತ್ಯುತ್ತಮವಾಗಿದೆ. ಫಿಟ್ನೆಸ್ ಹಾಗೂ ಕ್ರಿಕೆಟ್ ಮೇಲಿನ ಅವರಿಗಿರುವ ಶ್ರದ್ಧೆ ಕೂಡ ಅನುಕರಣೀಯ. ಬೌಲಿಂಗ್‌ನಲ್ಲಿ ಯಜುವೇಂದ್ರ ಚಾಹಲ್ ಇಷ್ಟ ಅನ್ನುತ್ತಾರೆ ಪ್ರತ್ಯೂಷಾ.

## ಆಗ ವಿಕೆಟ್ ಕೀಪರ್, ಈಗ ಆಲ್ರೌಂಡರ್!

ಪ್ರತ್ಯೂಷಾ ಅವರು ಕ್ರಿಕೆಟ್ ಆರಂಭಿಸುವಾಗ ವಿಕೆಟ್ ಕೀಪರ್- ಬ್ಯಾಟ್ಸ್‌ಮನ್ ಆಗಬೇಕೆಂಬ ಕನಸು ಕಂಡಿದ್ದರು. ಕೆಲ ಪಂದ್ಯಗಳಲ್ಲಿ ಆಡಿದ ಬಳಿಕ ಅವರು ಆಲ್ರೌಂಡರ್ ಆಗಲು ನಿರ್ಧರಿಸಿದರಂತೆ. 'ನಾನು ಬಾಲ್ಯದಲ್ಲಿ ವಿಕೆಟ್‌ಕೀಪರ್ ಆಗುವ ಯೋಜನೆಯಲ್ಲಿದ್ದೆ. ಆದರೆ ನನ್ನ ಮೊದಲ ಬೇಸಿಗೆ ಶಿಬಿರದಲ್ಲಿ ವೇಗದ ಬೌಲಿಂಗ್ ಮಾಡಿದೆ. ಬಳಿಕ ಅದು ಫಲ ನೀಡಿತು. ಕೀಪಿಂಗ್ ಯೋಜನೆಯನ್ನು ಕೈಬಿಟ್ಟೆ. ವೇಗದ ಬೌಲಿಂಗ್‌ನಲ್ಲಿ ಯಶಸ್ಸು ಸಿಗಲಿಲ್ಲ. 3 ವರ್ಷದ ನಂತರ ಲೆಗ್ ಸ್ಪಿನ್ ಬೌಲಿಂಗ್ ಮಾಡಲು ಆರಂಭಿಸಿದೆ. ಇದು ನನ್ನ ಕ್ರಿಕೆಟ್ ಬದುಕಿನ ಟರ್ನಿಂಗ್ ಪಾಯಿಂಟ್ ಕೂಡ ಆಗಿದೆ. ಸ್ಲಾಗ್ ಓವರ್‌ನಲ್ಲಿ ಬ್ಯಾಟಿಂಗ್ ಮಾಡುವ ಅವಕಾಶ ಸಿಗುತ್ತಿದೆ. ಆಗ ಅವಕಾಶವನ್ನು ಬಳಸಿಕೊಳ್ಳುತ್ತೇನೆ ಎಂದು ಪ್ರತ್ಯೂಷಾ ಹೇಳಿದರು.

## ರಾಷ್ಟ್ರೀಯ ತಂಡದಲ್ಲಿ ಆಡುವ ಆಸೆ ಇದೆ

ಭಾರತ ತಂಡದಲ್ಲಿ ಭರವಸೆಯ ಆಲ್ರೌಂಡರ್ ಆಗಿ ಆಡುವುದು ನನ್ನ ಕನಸು. ಸದ್ಯಕ್ಕೆ ರಾಜ್ಯ ತಂಡದಲ್ಲಿ ಟಿ20, ಏಕದಿನ ಟೂರ್ನಿ ಆಡುತ್ತಿದ್ದೇನೆ. ಇಲ್ಲಿ ಸಾಮರ್ಥ್ಯ ಮೀರಿ ಆಡುತ್ತೇನೆ. ಆಗ ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಸಿಗುವ ಭರವಸೆ ನನಗಿದೆ. ಮೊದಲು ಹೆರಾನ್ಸ್ ಕ್ಲಬ್ ಕೋಚ್ ಮುರಳಿ ಅವರಲ್ಲಿ ತರಬೇತಿ ಪಡೆಯುತ್ತಿದ್ದೆ. ಈಗ ಕಲ್ಪನಾ ಮೇಡಮ್ ಮಾರ್ಗದರ್ಶನ ನೀಡುತ್ತಿದ್ದಾರೆ. ರಾಷ್ಟ್ರೀಯ ಟೂರ್ನಿ ಇದ್ದಾಗ ಕೆಎಸ್‌ಸಿಎಯಲ್ಲಿ ಮಮತಾ ಮಾಬೆನ್ ಮೇಡಮ್ ಅವರಿಂದ ತರಬೇತಿ ಪಡೆಯುತ್ತೇವೆ. ಕಾಲೇಜು ಕೂಡ ನನ್ನ ಕ್ರಿಕೆಟ್‌ಗೆ ಸದಾ ಬೆಂಬಲ ನೀಡುತ್ತಿದೆ ಅನ್ನುವುದು ಪ್ರತ್ಯೂಷಾರ ಉತ್ಸಾಹದ ನುಡಿ.